ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ರವರ ನ್ಯಾಯಾಲಯ
ಚನ್ನರಾಯಪಟ್ಟಣ

-ಃ ಉಪಸ್ಥಿತರು ಃ-

**ಶ್ರೀ ರವಿ ಬಿ. ಚವ್ಹಾಣ,**
ಬಿ.ಎ., ಎಲ್‌ಎಲ್.ಬಿ.,(ಸ್ಪೆಷಲ್)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಚನ್ನರಾಯಪಟ್ಟಣ.

**ಅಸಲು ದಾವಾ ಸಂಖ್ಯೆಃ 718/2012**

**ದಿನಾಂಕಃ 30ನೇ ಸೆಪ್ಟಂಬರ್ 2015**

**ವಾದಿ** ಃ **ಲಕ್ಷ್ಮೀದೇವಮ್ಮ ಕೋಂ ಪೌತಿ ವೀರಬದ್ರಾಚಾರ್.**

**-ಃ ವಿರುದ್ಧ ಃ-**

**ಪ್ರತಿವಾದಿಯರು** ಃ **ಗೌಡೇಗೌಡ ಬಿನ್ ಲಕ್ಕೇಗೌಡ ಮತ್ತು ಇತರರರು**

**ಮಧ್ಯ ಕಾಲೀನ ಅರ್ಜಿ ನಂ.5**

**ಅರ್ಜಿದಾರರು** ಃ **ರಾಜಶೇಖರ ಬಿನ್ ವೀರಬದ್ರಾಚಾರ್**

**-ಃ ವಿರುದ್ಧ ಃ-**

**ಎದುರುದಾರರು** ಃ **ಗೌಡೇಗೌಡ ಬಿನ್ ಲಕ್ಕೇಗೌಡ ಮತ್ತು ಇತರರರು**

## ಮದ್ಯಕಾಲೀನ ಅರ್ಜಿ ನಂ.5 ರ ಮೇಲೆ ಆದೇಶ

ಅರ್ಜಿದಾರ/ವಾದಿಯ ಜಿ.ಪಿ.ಎ.ಹೋಲ್ಡರ್ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 3 ನಿಯಮ 2(ಎ) ರ ರೀತ್ಯಾ ಮದ್ಯಕಾಲೀನ ಅರ್ಜಿ ನಂ.5 ಸಲ್ಲಿಸಿ, ದಾವಾದಲ್ಲಿ ಕೆಳಗೆ ಕಾಣಿಸಿರುವವರನ್ನು ವಾದಿಯ ಪರ ಜನರಲ್ ಪವರ್ ಆಫ್ ಅಟಾರ್ನಿಹೋಲ್ಡರ್ ಆಗಿ ನೇಮಕ ಮಾಡಿಕೊಂಡು ವಾದಿಯ ಪರ ದಾವಾವನ್ನು ಮುಂದುವರೆಸಿಕೊಂಡು ಹೋಗಲು ಅನುಮತಿ ನೀಡಿ ಅವಕಾಶ ಕಲ್ಪಿಸಿ ಕೋಡಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿದಾರ/ವಾದಿಯ ಜಿ.ಪಿ.ಎ.ಹೋಲ್ಡರ್ ತನ್ನ ಅರ್ಜಿಯೊಂದಿಗೆ ಸಲ್ಲಿಸಿದ ತನ್ನ ಪ್ರಮಾಣ ಪತ್ರಿಕೆಯಲ್ಲಿ, ವಾದಿಯು ಪ್ರತಿವಾದಿಯರ ವಿರುದ್ದ ಮೇಲ್ಕಂಡ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆ ಡಿಕ್ರಿ ಕೋರಿ ದಾಖಲು ಮಾಡಿರುವುದಾಗಿ, ವಾದಿಯು ತನ್ನ ಖಾಸಾ ತಾಯಿಯಾಗಿರುತ್ತಾರೆಂದು, ದಾವಾದ ವಿಷಯ ತನಗೆ ಗೊತ್ತಿರುತ್ತದೆಂದು ಹೇಳಿರುತ್ತಾರೆ. ವಾದಿಗೆ ದಾವಾ ಸ್ವತ್ತು ಮಂಜೂರಾತಿ ಮೂಲಕ ಬಂದಂತಹ ಸ್ವತ್ತಾಗಿರುತ್ತದೆಂದು, ದಾವಾ ಸ್ವತ್ತಿನ ರೆವಿನ್ಯೂ ದಾಖಲಾತಿಗಳು ವಾದಿಯ ಹೆಸರಿನಲ್ಲಿದ್ದು, ತನ್ನ ತಾಯಿಗೆ ಈಗ ಸುಮಾರು 80 ವರ್ಷ ವಯಸ್ಸಾಗಿರುವುದರಿಂದ ಅವರಿಗೆ ಆರೋಗ್ಯ ಕೆಟ್ಟಿದ್ದು ನಡೆದಾಡುವ ಶಕ್ತಿ ಇಲ್ಲದಿರುವುದರಿಂದ ಘನ ನ್ಯಾಯಾಲಯಕ್ಕೆ ಹಾಜರಾಗಿ ದಾವಾ ನಡೆಸಿಕೊಂಡು ಸಾಧ್ಯವಾಗುತ್ತಿರುವುದಿಲ್ಲವೆಂದು, ಅವರ ಪರ ತಾನು ಜಿ.ಪಿ.ಎ.ಹೋಲ್ಡರ್ ಆಗಿ ದಾವಾವನ್ನು ವಾದಿಯ ಪರ ನಡೆಸಿಕೊಂಡು ಹೋಗಲು ಅನುಮತಿ ಅವಕಾಶ ಕಲ್ಪಿಸಿಕೊಡಬೇಕಾಗಿರುವುದು ನ್ಯಾಯಬಿವೃದ್ದಿ ದೃಷ್ಟಿಯಿಂದ ಅತ್ಯವಶ್ಯಕವೆಂದು

ಪ್ರಾರ್ಥಿಸಿರುವುದಾಗಿ, ತಾನು ಈ ಕೂಡಾ ಸಿ.ಪಿ.ಸಿ ಆದೇಶ 3 ನಿಯಮ 2(ಎ) ರನ್ವಯ ಮಧ್ಯಕಾಲಿನ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಮದ್ಯಕಾಲಿನ ಅರ್ಜಿಯನ್ನು ಪುರಸ್ಕರಿಸಿ ತಾನು ವಾದಿಯ ಜಿ.ಪಿ.ಎ. ಹೋಲ್ಡರ್ ಆಗಿ ವಾದಿಯ ಪರ ಮೇಲ್ಕಂಡ ದಾವೆಯನ್ನು ಮುಂದುವರೆಸಿಕೊಂಡು ಹೋಗಲು ಅನುಮತಿ ನೀಡಬೇಕೆಂದು ಮತ್ತು ತಾನು ತಂದಿರುವ ಸದರಿ ಮದ್ಯಕಾಲಿನ ಅರ್ಜಿಯನ್ನು ಪುರಸ್ಕರಿಸದಿದ್ದ ಪಕ್ಷದಲ್ಲಿ ತನಗೆ ತುಂಬಲಾರದ ಕಷ-ನಷ್ಟಗಳು ಸಂಬವಿಸ್ಮ್ರತ್ತದೆಂದು ಹಾಗೂ ಸದರಿ ಅರ್ಜಿಯನ್ನು ಪುರಸ್ಕರಿಸಿದ್ದ ಪಕ್ಷದಲ್ಲಿ ಎದುರುದಾರನಿಗೆ ಯಾವುದೇ ಕಷ್ಟನಷ-ಗಳು ಸಂಬವಿಸುವುದಿಲ್ಲವೆಂದು ಹೇಳಿ ಅರ್ಜಿಯನ್ನು ಪುರಸ್ಕರಿಸಲು ಕೋರಿಕೊಂಡಿರುತ್ತಾರೆ.

3. ಪ್ರತಿವಾದಿಯರು ಅರ್ಜಿದಾರ ಸಲ್ಲಿಸಿದ ಮಧ್ಯಂತ ಅರ್ಜಿ ಸಂಖ್ಯೆ 5ಕ್ಕೆ ಲಿಖಿತ ತಕರಾರು ಸಲ್ಲಿಸಿ ತಮ್ಮ ತಕರಾರಿನಲ್ಲಿ, ವಾದಿಯು ತಂದಿರುವ ಅರ್ಜಿಯು ಕಾನೂನಿನ ವಿದ್ಯಾಮಾನಗಳಡಿ ನಿಲ್ಲತಕ್ಕದ್ದಲ್ಲ ವಜಾ ಆಗತಕ್ಕದ್ದು ಎಂದು, ವಾದಿಯ ಅರ್ಜಿಯಲ್ಲಿ ತಿಳಿಸಿರುವ ಅಂಶಗಳು ಅರ್ಜಿಯನ್ನು ಸಲ್ಲಿಸುವ ಸಲುವಾಗಿಯೇ ಸೃಷ್ಟಿಸಿಕೊಂಡಿರುವ ಸುಳ್ಳು ಸಂಗತಿಗಳಾಗಿದ್ದು, ಪ್ರತಿವಾದಿಯರಿಗೆ ತೊಂದರೆ ಕೊಡುವ ದುರುದ್ದೇಶದಿಂದಲೇ ಸದರಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ತಂದಿರುತ್ತಾರೆಂದು, ಸದರಿ ದಾವೆಯಲ್ಲಿ ಸಾಮಾನ್ಯ ಅಧಿಕಾರದ ಮೂಲಕ ಅರ್ಜಿದಾರರಿಗೆ ದಾವೆಯನ್ನು ಮುಂದುವರೆಸಲು ಅನುಮತಿ ನೀಡಿದ್ದಲ್ಲಿ ದಾವೆಯು ನಿಜಸಂಗತಿಯನ್ನು ಮರೆಮಾಚಿ ವಾದಿ ಅಕ್ರಮಪಾಯಿದೆ ಹೊಂದುವ ಸಂಭವವಿರುತ್ತದೆಂದು, ವಾದಿಯ ಸಲ್ಲಿಸಿರುವ ದಾವೆಯನ್ನು ಸದರಿ ಅರ್ಜಿ ಸಲ್ಲಿಸಿ ಕಾಲವಿಳಂಭವನ್ನುಂಟು ಮಾಡುವ ಪ್ರಯತ್ನವಾಗಿರುತ್ತದೆಂದು ಹಾಗೂ ವಾದಿಯ ಆರೋಗ್ಯವಾಗಿ ಚೆನ್ನಾಗಿದ್ದು ನ್ಯಾಯಾಲಯದಲ್ಲಿ ಹಾಜರಾಗಿ ದಾವೆಯನ್ನು ನಡೆಸುವ

ಎಲ್ಲಾ ಸಾಮಾರ್ಥ್ಯವಿದ್ದರೂ ವಾದಿಯ ಸುಳ್ಳು ಮಾಹಿತಿ ನೀಡಿ ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ದಾಖಲು ಮಾಡಿದ್ದು, ಹಾಗೂ ವಾದಿಯ ಅರ್ಜಿಯಲ್ಲಿ ತನ್ನ ಆರೋಗ್ಯ ಸರಿಯಲ್ಲವೆಂದು ಹೇಳಿರುವ ಬಗ್ಗೆ ಘನ ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿರುವುದಿಲ್ಲವೆಂದು ಆದ್ದರಿಂದ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

4. ಅರ್ಜಿದಾರ/ವಾದಿಯ ಜಿ.ಪಿ.ಎ.ಹೋಲ್ಡರ್ ತನ್ನ ಅರ್ಜಿಯೊಂದಿಗೆ ಸಲ್ಲಿಸಿದ ತನ್ನ ಪ್ರಮಾಣ ಪತ್ರದಲ್ಲಿ ಹೇಳಿದ ಆಂಶಗಳು ಮತ್ತು ಪ್ರತಿವಾದಿಯರು ಸಲ್ಲಿಸಿದ ಲಿಖಿತ ತಕರಾರಿನ ಅಂಶಗಳು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

5. ಈ ಕೆಳಕಂಡ ಅಂಶಗಳನ್ನು ತೀರ್ಮಾನಿಸುವುದು ಅವಶ್ಯಕವೆಂದು ಕಂಡು ಬರುತ್ತದೆ.

1. ಅರ್ಜಿದಾರ ಸದರೀ ಅರ್ಜಿ ನಂ.5ನ್ನು ಪುರಸ್ಕರಿಸಲು ಸಕಾರಣಗಳು ಇರುತ್ತದೆಂದು ರುಜುವಾತುಪಡಿಸುತ್ತಾನೆಯೇ?

2. ಯಾವ ಅದೇಶ?

6. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 ಃ **ಸಕಾರಾತ್ಮಕವಾಗಿ**
ಅಂಶ ನಂ.2 ಃ ಅಂತಿಮ ಆದೇಶ, ಈ ಕೆಳಕಂಡ ಕಾರಣಗಳಿಗಾಗಿ

## ಃ ಕಾ ರ ಣ ಗ ಳು ಃ-

**7. ಅಂಶ–1 ಃ** ಈ ಪ್ರಕರಣದಲ್ಲಿ ವಾದಿಯ ಪರ ಸಾಕ್ಷಿವಿಚಾರಣೆಗೆಂದು ಮುಂದೂಡಲಾಗಿರುತ್ತದೆ.

8. ಅರ್ಜಿದಾರ/ವಾದಿಯ ಜಿ.ಪಿ.ಎ.ಹೋಲ್ಡರ್ ವಾದಿಯು ಪ್ರತಿವಾದಿಯರ ವಿರುದ್ದ ಮೇಲ್ಕಂಡ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆ ಡಿಕ್ರಿ ಕೋರಿ ದಾಖಲು ಮಾಡಿರುವುದಾಗಿ, ವಾದಿಯು ತನ್ನ ಖಾಸಾ ತಾಯಿಯಾಗಿರುತ್ತಾರೆಂದು, ದಾವಾದ ವಿಷಯ ತನಗೆ ಗೊತ್ತಿರುತ್ತದೆಂದು ಹೇಳಿರುತ್ತಾರೆ. ವಾದಿಗೆ ದಾವಾ ಸ್ವತ್ತು ಮಂಜೂರಾತಿ ಮೂಲಕ ಬಂದಂತಹ ಸ್ವತ್ತಾಗಿರುತ್ತದೆಂದು, ದಾವಾ ಸ್ವತ್ತಿನ ರೆವಿನ್ಯೂ ದಾಖಲಾತಿಗಳು ವಾದಿಯ ಹೆಸರಿನಲ್ಲಿದ್ದು, ತನ್ನ ತಾಯಿಗೆ ಈಗ ಸುಮಾರು 80 ವರ್ಷ ವಯಸ್ಸಾಗಿರುವುದರಿಂದ ಅವರಿಗೆ ಆರೋಗ್ಯ ಕೆಟ್ಟಿದ್ದು ನಡೆದಾಡುವ ಶಕ್ತಿ ಇಲ್ಲದಿರುವುದರಿಂದ ಘನ ನ್ಯಾಯಾಲಯಕ್ಕೆ ಹಾಜರಾಗಿ ದಾವಾ ನಡೆಸಿಕೊಂಡು ಸಾಧ್ಯವಾಗುತ್ತಿರುವುದಿಲ್ಲವೆಂದು, ಅವರ ಪರ ತಾನು ಜಿ.ಪಿ.ಎ.ಹೋಲ್ಡರ್ ಆಗಿ ದಾವಾವನ್ನು ವಾದಿಯ ಪರ ನಡೆಸಿಕೊಂಡು ಹೋಗಲು ಅನುಮತಿ ಅವಕಾಶ ಕಲ್ಪಿಸಿಕೊಡಬೇಕಾಗಿರುವುದು ನ್ಯಾಯಬಿವೃದ್ದಿ ದೃಷ್ಟಿಯಿಂದ ಅತ್ಯವಶ್ಯಕವೆಂದು ಪ್ರಾರ್ಥಿಸಿರುವುದಾಗಿ, ತಾನು ಈ ಕೂಡಾ ಸಿ.ಪಿ.ಸಿ ಆದೇಶ 3 ನಿಯಮ 2(ಎ) ರನ್ವಯ ಮಧ್ಯಕಾಲಿನ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಮದ್ಯಕಾಲಿನ ಅರ್ಜಿಯನ್ನು

ಪುರಸ್ಕರಿಸಿ ತಾನು ವಾದಿಯ ಜಿ.ಪಿ.ಎ. ಹೋಲ್ಡರ್ ಆಗಿ ವಾದಿಯ ಪರ ಮೇಲ್ಕಂಡ ದಾವೆಯನ್ನು ಮುಂದುವರೆಸಿಕೊಂಡು ಹೋಗಲು ಅನುಮತಿ ನೀಡಬೇಕೆಂದು ಮತ್ತು ತಾನು ತಂದಿರುವ ಸದರಿ ಮದ್ಯಕಾಲಿನ ಅರ್ಜಿಯನ್ನು ಪುರಸ್ಕರಿಸದಿದ್ದ ಪಕ್ಷದಲ್ಲಿ ತನಗೆ ತುಂಬಲಾರದ ಕಷ-ನಷ್ಟಗಳು ಸಂಬವಿಸ್ಮತ್ತದೆಂದು ಹಾಗೂ ಸದರಿ ಅರ್ಜಿಯನ್ನು ಪುರಸ್ಕರಿಸಿದ್ದ ಪಕ್ಷದಲ್ಲಿ ಎದುರುದಾರನಿಗೆ ಯಾವುದೇ ಕಷ್ಟನಷ-ಗಳು ಸಂಬವಿಸುವುದಿಲ್ಲವೆಂದು ಹೇಳಿ ಅರ್ಜಿಯನ್ನು ಪುರಸ್ಕರಿಸಲು ಕೋರಿಕೊಂಡಿರುತ್ತಾರೆ.

9. ಪ್ರತಿವಾದಿಯರು ಅರ್ಜಿದಾರ ಸಲ್ಲಿಸಿದ ಮಧ್ಯಂತ ಅರ್ಜಿ ಸಂಖ್ಯೆ 5ಕ್ಕೆ ಲಿಖಿತ ತಕರಾರು ಸಲ್ಲಿಸಿ ತಮ್ಮ ತಕರಾರಿನಲ್ಲಿ, ವಾದಿಯು ತಂದಿರುವ ಅರ್ಜಿಯು ಕಾನೂನಿನ ವಿದ್ಯಾಮಾನಗಳಡಿ ನಿಲ್ಲತಕ್ಕದ್ದಲ್ಲ ವಜಾ ಆಗತಕ್ಕದ್ದು ಎಂದು, ವಾದಿಯ ಅರ್ಜಿಯಲ್ಲಿ ತಿಳಿಸಿರುವ ಅಂಶಗಳು ಅರ್ಜಿಯನ್ನು ಸಲ್ಲಿಸುವ ಸಲುವಾಗಿಯೇ ಸೃಷ್ಟಿಸಿಕೊಂಡಿರುವ ಸುಳ್ಳು ಸಂಗತಿಗಳಾಗಿದ್ದು, ಪ್ರತಿವಾದಿಯರಿಗೆ ತೊಂದರೆ ಕೊಡುವ ದುರುದ್ದೇಶದಿಂದಲೇ ಸದರಿ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ತಂದಿರುತ್ತಾರೆಂದು, ಸದರಿ ದಾವೆಯಲ್ಲಿ ಸಾಮಾನ್ಯ ಅಧಿಕಾರದ ಮೂಲಕ ಅರ್ಜಿದಾರರಿಗೆ ದಾವೆಯನ್ನು ಮುಂದುವರೆಸಲು ಅನುಮತಿ ನೀಡಿದ್ದಲ್ಲಿ ದಾವೆಯು ನಿಜಸಂಗತಿಯನ್ನು ಮರೆಮಾಚಿ ವಾದಿ ಅಕ್ರಮಪಾಯಿದೆ ಹೊಂದುವ ಸಂಭವವಿರುತ್ತದೆಂದು, ವಾದಿಯ ಸಲ್ಲಿಸಿರುವ ದಾವೆಯನ್ನು ಸದರಿ ಅರ್ಜಿ ಸಲ್ಲಿಸಿ ಕಾಲವಿಳಂಭವನ್ನುಂಟು ಮಾಡುವ ಪ್ರಯತ್ನವಾಗಿರುತ್ತದೆಂದು ಹಾಗೂ ವಾದಿಯ ಆರೋಗ್ಯವಾಗಿ ಚೆನ್ನಾಗಿದ್ದು ನ್ಯಾಯಾಲಯದಲ್ಲಿ ಹಾಜರಾಗಿ ದಾವೆಯನ್ನು ನಡೆಸುವ ಎಲ್ಲಾ ಸಾಮಾರ್ಥ್ಯವಿದ್ದರೂ ವಾದಿಯ ಸುಳ್ಳು ಮಾಹಿತಿ ನೀಡಿ ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ದಾಖಲು ಮಾಡಿದ್ದು, ಹಾಗೂ ವಾದಿಯ

ಅರ್ಜಿಯಲ್ಲಿ ತನ್ನ ಆರೋಗ್ಯ ಸರಿಯಲ್ಲವೆಂದು ಹೇಳಿರುವ ಬಗ್ಗೆ ಘನ ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿರುವುದಿಲ್ಲವೆಂದು ಆದ್ದರಿಂದ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

10. ನಾನು ಈ ಹಂತದಲ್ಲಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 3 ನಿಯಮ 1 ಮತ್ತು 2 ಉಲ್ಲೇಖ ಪಡಿಸಲು ಇಚ್ಛಿಸುತ್ತೇನೆ, ಅದು ಈ ಕೆಳಗಿನಂತೆ ಇರುತ್ತದೆ;

> ***"1 Appearances etc., may be in person, by recognized agent or by Pleader:-*** *Any appearance, application or act in or to any Court, required or authorized by law to be made or done by a party in such court, may, except where otherwise expressly provided by any law for the time being in force, be made or done by the party in person, or by his recognized agent, or by a pleader appearing, applying or acting, as the case may be, on his behalf:*
>
> *Provided that any such appearance shall, if the Court so directs, be made by the party in person."*

ಈ ಮೇಲಿನಂತೆ ಉಲ್ಲೇಖಿಪಡಿಸಿದ ನಿಯಮ 1 ರ ಪ್ರಕಾರ ದಾವೆಯ ಯಾವುದೇ ಪಕ್ಷಗಾರನಿಗೆ ಖುದ್ದಾಗಿ ಹಾಜರಾಗಲು, ಅರ್ಜಿ ಸಲ್ಲಿಸಲು ಅಥವಾ ಅದರಲ್ಲಿ ಕಾರ್ಯವನ್ನು ನಿರ್ವಹಿಸಲು ತನ್ನ ಪರ ವಕೀಲರನ್ನು ನೇಮಕ ಮಾಡದೇ ಮತ್ತು ಇಂಥಹ ಎಲ್ಲಾ ಕಾರ್ಯಗಳನ್ನು ತನ್ನ ಮಾನ್ಯತೆ ಪಡೆದ ಏಜೆಂಟ್ ಮೂಲಕ ಪಕ್ಷಗಾರ ಮುಖ್ತ್ಯಾರನಾಮೇ ಹೊಂದಿರುವ ವ್ಯಕ್ತಿಗಳ ಮೂಲಕ ಕಾರ್ಯವನ್ನು ನಿರ್ವಹಿಸಲು ಅನುಮತಿ ಕೊಟ್ಟಿರುತ್ತದೆ. ಸದರಿ ಕಾರ್ಯವನ್ನು ಪಕ್ಷಗಾರ ತನ್ನ ಪ್ಲೀಡರ್ ಮೂಲಕ ಸಹ ಮಾಡಬಹುದು.

11. ಪರಂತು, ಆ ಪಕ್ಷಗಾರನು ಖುದ್ದಾಗಿ ಹಾಜರಾಗಬೇಕೆಂದು ಯಾವುದೇ ಕಾನೂನಿನ ವಿಧಿಯ ಪ್ರಕಾರ ಅಪವಾದ ಇದ್ದರೆ ಅಂಥಹ ಸಂದರ್ಭದಲ್ಲಿ ಪಕ್ಷಗಾರನು ಖುದ್ದಾಗಿ ಹಾಜರಾಗಬೇಕೆಂದು ನ್ಯಾಯಾಲಯ ನಿರ್ದೇಶಿಸಿದರೆ ಅವನು ಖುದ್ದಾಗಿ ಹಾಜರಾಗತಕ್ಕದ್ದು ಉಪಬಂದಿಸಿರುವಲ್ಲಿ ತನ್ನ ಮುಖ್ತ್ಯಾರನಾಮೇ ಹೊಂದಿದ ಏಜೆಂಟ್ ಅಥವಾ ಪ್ಲೀಡರ್ ಹಾಜರಾಗಲು ಬರುವುದಿಲ್ಲ.

12. ನಿಯಮ 2 ಈ ಕೆಳಕಂಡತೆ ಹೇಳುತ್ತದೆ.

> ***"2. Recognised Agents.-*** *The recognized agents of parties by whom such appearances, applications and acts may be made or done are-*
>
> ***(A)*** *Persons holding powers of-attorney, authorizing them to make and do*

*such appearances, applications and acts on behalf of such parties.*

***(B)*** *Persons carrying on trade or business for and in the names of parties not resident within the local limits of the jurisdiction of the Court within which limits the appearance, application or act is made or done, in mattes connected with such trade or business only, where no other agent is expressly authorized to make and do such appearances, applications and acts.*

ಈ ಮೇಲಿನ ನಮೂದಿಸಿದ ಕ್ರಮಾದೇಶ 3 ನಿಯಮ 1 ಮತ್ತು 2 ನಿಯಮದ ಪ್ರಕಾರ ಸ್ಪಷ್ಟವಾಗುವುದೇನೆಂದರೆ ಕಾನೂನಿನ ಮೂಲಕ ಪಕ್ಷಗಾರ ಅಗತ್ಯಪಡಿಸಿದಾಗ ಅಥವಾ ಅಧಿಕೃತಗೊಳಿಸಿದಾಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅನ್ಯಥಾ ವ್ಯಕ್ತವಾಗಿ ಉಪಬಂದಿಸಿರುವಲ್ಲಿ ಹೊರತು, ಪಕ್ಷಗಾರ ಖುದ್ದಾಗಿ ಹಾಜರಾಗಿ ಪ್ರಕರಣ ನಡೆಸುವಂತೆ ಒತ್ತಾಯಪಡಿಸುವುದಿಲ್ಲ, ದಾವೆಯ ಪಕ್ಷಗಾರ ಖುದ್ದಾಗಿ ಅಥವಾ ಸಂದರ್ಭಾನುಸಾರ ಅವನ ಪರವಾಗಿ ಹಾಜರಾಗುತ್ತಿರುವ, ಅರ್ಜಿ ಸಲ್ಲಿಸುತ್ತಿರುವ ಅಥವಾ ಕಾರ್ಯ ನಿರ್ವಹಿಸುತ್ತಿರುವ ಮಾನ್ಯತೆ ಪಡೆದ ಅವರ ಏಜೆಂಟ್ ಮೂಲಕ ಅಥವಾ ಪ್ಲೀಡರ್ ಮೂಲಕ ಹಾಜರಾಗಿ ದಾವೆಯನ್ನು ಸಲ್ಲಿಸಬಹುದು ಮತ್ತು ಪ್ರತಿರಕ್ಷಣೆ ಮಾಡಿಕೊಳ್ಳಬಹುದು. ಕಾನೂನು ಈ ಅಧಿಕಾರವನ್ನು ಪಕ್ಷಗಾರನಿಗೆ ಕೊಟ್ಟಿರುತ್ತದೆ, ಅದು ಕಾನೂನು ಪ್ರಕಾರ

ಮಾನ್ಯತೆ ಇರುತ್ತದೆ. ಆದ್ದರಿಂದ ಪಕ್ಷಗಾರ ತನ್ನ ಮುಖ್ತ್ಯಾರುನಾಮೇ (ಜಿ.ಪಿ.ಎ.) ಹೊಂದಿರುವ ತನ್ನ ಅಧಿಕೃತ ಏಜೆಂಟ್ ಮೂಲಕ ದಾವೆ ನಡೆಸಲು ನ್ಯಾಯಾಲಯದಿಂದ ಅನುಮತಿ ಕೋರುವ ಪ್ರಶ್ನೇಯೇ ಉದ್ಭವಾಗುವುದಿಲ್ಲ. ನ್ಯಾಯಾಲಯ ಅಂಥಹ ಪಕ್ಷಗಾರನ ತನ್ನ ಅಧಿಕೃತ ಏಜೆಂಟ್ ಮೂಲಕ ತನ್ನ ಪರ ದಾವೆಯಲ್ಲಿ ಹಾಜರಾಗಿ ದಾವೆ ನಡವಳಿಕೆ ನಡೆಸದಂತೆ ನಿರ್ಭಂಧಿಸಲು ಬರುವುದಿಲ್ಲ. ಕೆಲವೊಂದು ಅಪವಾದಾತ್ಮಕ ಪ್ರಕರಣಗಳಲ್ಲಿ ಅಂದರೆ ಕೌಟುಂಬಿಕ ನ್ಯಾಯಾಲಯ ಅಧಿನಿಯಮದ ಪ್ರಕಾರ ಪಕ್ಷಗಾರನು ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗಬೆಕಾಗುತ್ತದೆ. ಇಂಥಹ ಸಂದರ್ಭದಲ್ಲಿ ಪಕ್ಷಗಾರನು ತನ್ನ ಅಧಿಕೃತ ಏಜೆಂಟ್‌ರು ಮೂಲಕ ಅಥವಾ ತನ್ನ ಪ್ಲೀಡರ್ ಮೂಲಕ ತನ್ನ ಗೈರು ಹಾಜರಾತಿಯಲ್ಲಿ ದಾವೆ ನಡೆಸಲು ಬರುವುದಿಲ್ಲ. ಈ ದಾವೆ ವಾದಿಯು ಪ್ರತಿವಾದಿಯರ ವಿರುದ್ದ ಶಾಶ್ವತ ನಿರ್ಭಂದಕಾಜ್ಞೆಕ್ಕಾಗಿ ಕೋರಿ ಸಲ್ಲಿಸಿದ್ದು ದಾವೆ ನಡವಳಿಕೆಯಲ್ಲಿ ಹಾಜರಾಗಿ ಪ್ರಕರಣ ನಡೆಸಿಕೊಂಡು ಹೋಗಲು ವಾದಿಗೆ ವಯಸ್ಸಾಗಿರುವುದರಿಂದ ಮತ್ತು ಆರೋಗ್ಯ ಸರಿಯಲ್ಲದ ಕಾರಣ ತನ್ನ ಖಾಸಾ ಮಗ ಅರ್ಜಿದಾರನಿಗೆ ಮುಖ್ತ್ಯಾರನಾಮೇ ಪತ್ರವನ್ನು (ಜಿ.ಪಿ.ಎ.) ಬರೆದುಕೊಟ್ಟಿರುತ್ತಾರೆ.

ಆದ್ದರಿಂದ ಅರ್ಜಿದಾರ ಸಲ್ಲಿಸಿದ ಅರ್ಜಿಯನ್ನು ಮಾನ್ಯ ಮಾಡಲು ಕಾನೂನಿನ ರೀತ್ಯಾ ಯಾವುದೇ ತೊಡುಕು ಇರುವುದಿಲ್ಲ. ಆದ್ದರಿಂದ ಅಂಶ ನಂ.1ನ್ನು ***ಸಕಾರಾತ್ಮಕವಾಗಿ*** ಉತ್ತರಿಸಲಾಗಿದೆ.

13. **<u>ಅಂಶ-2</u>** :- ಈ ಮೇಲಿನ 1ನೇ ಅಂಶ ಚರ್ಚೆಯಿಂದ ಮತ್ತು ಅವುಗಳಿಗೆ ನೀಡಿದ ಉತ್ತರಗಳಿಂದ ಈ ಕೆಳಗಿನಂತೆ ಅಂತಿಮ ಅದೇಶ ಮಾಡಲಾಗಿದೆ.

**-:: ಆದೇಶ ::-**

ಅರ್ಜಿದಾರ ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 3 ನಿಯಮ 2(ಎ) ರ ರೀತ್ಯಾ ಮದ್ಯಕಾಲೀನ ಅರ್ಜಿ ನಂ.5ನ್ನು ಪುರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ನಂತರ ತಪ್ಪುಗಳನ್ನು ತಿದ್ದುಪಡಿ ಮಾಡಿ, ತಪ್ಪಿದ್ದಲ್ಲಿ ತಿದ್ದಿ ಇವತ್ತು ದಿನಾಂಕ 30ನೇ ಸೆಪ್ಟಂಬರ್ 2015 ರಂದು ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ರವಿ ಬಿ. ಚವ್ಹಾಣ)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.